ಉಪಾಧ್ಯಕ್ಷಣೆಯವರು :– ಬೆಳಿಗ್ಗೆ ಇದರ ಬಗ್ಗೆ ತಾವು ಮಾತನಾಡಿದ್ದೀರಿ ಸರ್ಕಾರದವರು ಸಹ ಉತ್ತರ ಕೊಟ್ಟು ತಮ್ಮ ನಿಲುವು ಏನು ಎಂದು ಸ್ಪಷ್ಟಪಡಿಸಿದ್ದಾರೆ. ಅದು ತಮಗೂ ಗೊತ್ತಿದೆ. ಆದ್ದರಿಂದ ಈ ಸಭೆ ಸುಗಮವಾಗಿ ನಡೆಯುವುದಕ್ಕೆ ತಾವು ಅವಕಾಶ ಮಾಡಿ ಕೊಡಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷಣೆಯವರೇ ತಾವು ಸ್ವಲ್ಪ ಅವಕಾಶ ಕೊಡಬೇಕು.

ಉಪಾಧ್ಯಕ್ಷರು :– ಬೆಳಿಗ್ಗೆ ತಮ್ಮ ಲೀಡರ್ ಮಾತನಾಡಿದ್ದಾರೆ ಅದಕ್ಕೆ ಸರ್ಕಾರದ ಉತ್ತರ ಸಹ ಕೊಟ್ಟಿದೆ. ಸರ್ಕಾರದ ನಿಲುವು ತಮಗೆ ಗೊತ್ತಾಗಿದೆ.

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಮುಖ್ಯಮಂತ್ರಿಗಳು ನಮಗೆ ಸ್ಪಷ್ಟವಾದ ಉತ್ತರ ಕೊಡಬೇಕು. ಆವರು ಸ್ಪಷ್ಟವಾದ ಉತ್ತರ ಕೊಡದೆ ಇದ್ದುದಕ್ಕಾಗಿ ನಮ್ಮ ನಾಯಕರು ಧರಣಿ ಕುಳಿತು ಕೊಂಡಿದ್ದಾರೆ. ನಾವು ಧರಣಿ ಕುಳಿತುಕೊಳ್ಳುವುದು ಬೇಡ ಎಂದಾದರೆ ನಮಗೆ ಸ್ಪಷ್ಟವಾದ ಉತ್ತರ ಕೊಡಿ. ಅಲ್ಲಿ ಚೆಕ್ಸ್ ಪೋಸ್ಟ್ ಆಗುತ್ತಿವೆ. ರೈತರಿಂದ ಸಾಲ ವಸೂಲಾತಿ ನಿಲ್ಲಿಸಿ ಇದರ ಬಗ್ಗೆ ಗಮನ ಕೊಟ್ಟು ಸ್ಪಷ್ಟವಾದ ಉತ್ತರ ಕೊಡಲಿ.

ಉಪಾಧ್ಯಕ್ಷರು :– ಅವರು ಉತ್ತರ ಕೊಟ್ಟಿದ್ದಾರೆ. ಶ್ರೀ ಟಿ. ಬಿ. ಜಯಚಂದ್ರ ತಾವು ಮಾನ್ಯ ಮಂತ್ರಿಗಳ ಗಮನಕ್ಕೆ ತನ್ನಿರಿ.

ಗಮನ ಸೆಳೆಯುವ ಸೂಚನೆ.

ವಿಷಯ :– 1) ರಾಜ್ಯದಲ್ಲಿ ಕೊಬ್ಬರಿ ಬೆಲೆ ಇಳಿದಿರುವುದರಿಂದ ರೈತರಿಗೆ ಆಗಿರುವ ತೊಂದರೆ.

ಶ್ರೀ ಟಿ. ಬಿ. ಜಯಚಂದ್ರ :– ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕೊಬ್ಬರಿ ಬೆಲೆ ಇಳಿದಿರುವುದರಿಂದ ರೈತರಿಗೆ ಆಗಿರುವ ತೊಂದರೆ ಬಗ್ಗೆ ಕೃಷಿ ಮತ್ತು ತೋಟಗಾರಿಕೆ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷರೇ, ನಾವು ಸದನದಲ್ಲಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಮತ್ತು ಮಾನ್ಯ ಮುಖ್ಯಮಂತ್ರಿಗಳ ಮನೆಯ ಮುಂದೆ ಸಹ ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

ಉಪಾಧ್ಯಕ್ಷರು :– ತಾವು ಈ ರೀತಿ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುವುದು ಸರಿಯಲ್ಲ. ಅಧ್ಯಕ್ಷರ ಅಪ್ಪಣೆ ಇಲ್ಲದೆ ಯಾರು ಮಾತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ.

(ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ.)

ಉಪಾಧ್ಯಕ್ಷರು :– ತಾವು ಸಭೆಯ ಕಾರ್ಯಕಲಾಪಗಳಿಗೆ ಈ ರೀತಿ ಅಡ್ಡಿಪಡಿಸುವುದು ಸರಿಯಲ್ಲ. ತಾವು ಕುಳಿತುಕೊಳ್ಳಬೇಕು. ಬೆಳಿಗ್ಗೆ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಲಿ.

† ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :– ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿತದ ಬಗ್ಗೆ ಸರ್ಕಾರ ಗಮನ ಹರಿಸಿದ್ದು ದಿ. 25-8-1990 ರಲ್ಲಿ ಮಾನ್ಯಮುಖ್ಯ ಮಂತ್ರಿಗಳು ಭಾರತದ ಪ್ರಧಾನ ಮಂತ್ರಿಗಳಿಗೆ ಆರೆ ಸರ್ಕಾರಿ ಪತ್ರವನ್ನು ಬರೆದು ಈಗಾಗಲೇ ಎಣ್ಣೆ ಕೊಬ್ಬರಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿ ಪಡಿಸಿ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನಿಷ್ಠ ಬೆಂಬಲ ಬೆಲೆ ಕ್ವಿಂಟಲ್ ಒಂದಕ್ಕೆ 1,600–00ರೂ. ಗಳಂತೆ ಕೊಳ್ಳುತ್ತಿದ್ದು, ಇದೇ ರೀತಿ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಇನ್ನು ಹೆಚ್ಚಿನ ಗುಣಮಟ್ಟದ ಒಣ ಕೊಬ್ಬರಿಗೂ ಕನಿಷ್ಠ ಬೆಲೆ ರೂ. 2,500–00 ಗಳಿಗೆ ನಿಗದಿಪಡಿಸಿ, ರೈತರಿಂದ ಒಣ ಕೊಬ್ಬರಿಯನ್ನೂ ಸಹ ಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿದ್ದರು. ಸದರಿ ಮನವಿಯನ್ನು ಪುರಸ್ಕರಿಸಿ ಭಾರತ ಸರ್ಕಾರವು ಕೃಷಿ ಬೆಲೆಗಳನ್ನು ನಿಗದಿಪಡಿಸುವ ಆಯೋಗದ ಅಧ್ಯಕ್ಷರಾದ ಪ್ರೊ.ಎಸ್. ಎಸ್. ಜೋಲ್, ಸದಸ್ಯ ಕಾರ್ಯದರ್ಶಿಯವರಾದ ಡಾ. ಡಿ.ಎಸ್. ತ್ಯಾಗಿ ಮತ್ತು ನಿರ್ದೇಶಕರಾದ ಡಾ. ಆರ್. ಸಿ. ಸಿನ್ಹಾ ರವರನ್ನೊಳಗೊಂಡ ನಿಯೋಗವನ್ನು ಬೆಂಗಳೂರಿಗೆ ಕಳುಹಿಸಿದ್ದು, ದಿ. 13–12–1990 ರಂದು ಕರ್ನಾಟಕ ರಾಜ್ಯ ಸರ್ಕಾರದೊಡನೆ ನಡೆಸಿದ ಸಭೆಯಲ್ಲಿ ಎಣ್ಣೆ ಕೊಬ್ಬರಿಗೆ ನಿಗದಿಪಡಿಸಿದ ಕನಿಷ್ಠ ಬೆಂಬಲ ಬೆಲೆ ರೀತಿಯಲ್ಲೇ, ರಾಜ್ಯದಲ್ಲಿ ಉತ್ಪಾದನೆಯಾಗುವ ಒಣ ಕೊಬ್ಬರಿಗೂ ಸಹ ಕ್ವಿಂಟಲ್ ಒಂದಕ್ಕೆ 2,500–00 ರೂ. ಗಳ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸ ಬೇಕೆಂದು ಭಾರತ ಸರ್ಕಾರದ ಆಯೋಗವನ್ನು ಕರ್ನಾಟಕ ಸರ್ಕಾರವು ಒತ್ತಾಯಿಸಿದ್ದು, ಇದರ ಅವಶ್ಯಕತೆಯನ್ನು ಸಹಾ ಮನದಟ್ಟು ಮಾಡಲಾಗಿದೆ. ಆಯೋಗವು ಇದರ ಬಗ್ಗೆ ಪರಿಶೀಲಿಸುವುದಾಗಿ ಭರವಸೆ ನೀಡಿದೆ.

ಉಪಾಧ್ಯಕ್ಷಣಿಯವರು :– ತಾವು ಕುಳಿತುಕೊಳ್ಳಬೇಕು. ಬೆಳಿಗ್ಗೆ ಸಾಕಷ್ಟು ಜನರು ಈ ವಿಷಯದ ಬಗ್ಗೆ ಮಾತನಾಡಿದ್ದಾರೆ. ಸರ್ಕಾರದವರು ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಮಂತ್ರಿಗಳು ಸಾಕಷ್ಟು ಇದರ ಬಗ್ಗೆ ವಿವರ ಕೊಟ್ಟಿದ್ದಾರೆ. ಆದರೂ ಮತ್ತೆ ತಾವು ಈ ವಿಷಯ ಎತ್ತಿ ಸಭೆಯ ಕಾರ್ಯ ಕಲಾಪಗಳಿಗೆ ಅಡ್ಡಿಪಡಿಸುವುದು ಸರಿಯಲ್ಲ. ಈಗ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳು ಉತ್ತರ ಸಹ ಕೊಟ್ಟಿದ್ದಾರೆ. ಜಯಚಂದ್ರರವರೇ ತಾವು ಕ್ಲಾರಿಫಿಕೇಷನ್ಸ್ ಕೇಳುವುದಾದರೆ ಕೇಳಿ.

(ಅನೇಕ ಮಾನ್ಯ ಸದಸ್ಯರು ಈ ಸಂದರ್ಭದಲ್ಲಿ ಮಾತನಾಡುತ್ತಿದ್ದರು.)

ಉಪಾಧ್ಯಕ್ಷಣಿಯವರು :– ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಈ ಸಂದರ್ಭದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳಾದ ಶ್ರೀ ಕೆ. ಎಸ್. ಈಶ್ವರಪ್ಪ ಮತ್ತು ರುಕ್ಮಯ್ಯ ಪೂಜಾರಿಯವರು ಪ್ರತಿಭಟನೆ ಮಾಡಿ, ತಮ್ಮ ನಾಯಕರಾದ ಶ್ರೀ ಬಿ. ಎಸ್. ಯಡಿಯೂರಪ್ಪ ನವರು ಧರಣಿ ಕುಳಿತಿದ್ದ ಸ್ಥಳಕ್ಕೆ ಹೋಗಿ ಅವರೂ ಸಹಾ ಧರಣಿಯಲ್ಲಿ ಪಾಲ್ಗೊಂಡರು.)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಉಪಾಧ್ಯಕ್ಷಣಿಯವರೆ, ತಮ್ಮಲ್ಲಿ ಒಂದು ಮನವಿ.

ಉಪಾಧ್ಯಕ್ಷಣಿಯವರು :– ಅವರು ಗಮನ ಸೆಳೆದಿದ್ದಾರೆ. ಸಚಿವರು ಉತ್ತರ ಕೊಟ್ಟಿದ್ದಾರೆ. ಈಗ ಅವರು ಕ್ಲಾರಿಫಿಕೇಷನ್ ಕೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :– ಸಭೆ ಕ್ರಮಬದ್ಧವಾಗಿದೆಯೇ ? ಸಾಮಾನ್ಯವಾಗಿ ಇಂಥ ಸಂದರ್ಭ ಬಂದಾಗ, ಧರಣಿ ಕುಳಿತವರನ್ನು ಕರೆದು ಮಾತನಾಡಿ ಒಂದು ತಿಳಿ ವಾತಾವರಣ ಉಂಟು ಮಾಡುವುದು ಸಂಪ್ರದಾಯ. ದಯಮಾಡಿ ಅವರುಗಳನ್ನು ತಮ್ಮ ಚೇಂಬರಿಗೆ ಕರೆದು ಮಾತನಾಡಿ ಒಂದು ತಿಳಿ ವಾತಾವರಣ ಉಂಟು ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಡೆದುಕೊಂಡು ಬಂದಿದೆ. ಅವರು ಅಲ್ಲಿ ಕುಳಿತುಕೊಂಡಿರುವಾಗ ಸಭೆ ನಡೆಸುವುದು ಅಷ್ಟು ಸೌಜನ್ಯವಾಗಿ ಕಾಣುವುದಿಲ್ಲ.

ಶ್ರೀ ಎಂ. ಪಿ. ವೆಂಕಟೇಶ್ :– ಮಾನ್ಯ ಉಪಾಧ್ಯಕ್ಷಣಿಯವರೆ, ಒಂದು ನಿಮಿಷ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. 10 ಸಾವಿರ ರೂಪಾಯಿ ಒಳಗಿನ ಸಾಲವನ್ನು ವಸೂಲಾತಿ ಮಾಡುವುದಿಲ್ಲವೆಂದು ಹೇಳಿದ್ದಾರೆ. ಆದರ ಬಗ್ಗೆ ಇನ್ನೂ ಎರಡು ಮೂರು ದಿವಸಗಳ ಕಾಲ ಟೈಮ್ ಕೊಡೋಣ. ಮಾನ್ಯ ಯಡಿಯೂರಪ್ಪನವರೂ ಹಿರಿಯ ಸದಸ್ಯರಾಗಿದ್ದಾರೆ. ಅವರು ಈ ಸರ್ಕಾರಕ್ಕೆ ಇನ್ನು ಎರಡು ಮೂರು ದಿವಸಗಳ ಕಾಲ ಅವಕಾಶ ಕೊಟ್ಟು ನೋಡಬೇಕೆಂದು ನಾನು ಹೇಳುತ್ತೇನೆ. ರೈತರ ಬಗ್ಗೆ ಎಲ್ಲರಿಗೂ ವಿಶ್ವಾಸ ಇದೆ. ಆದ್ದರಿಂದ ಮಾನ್ಯ ಯಡಿಯೂರಪ್ಪನವರು ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು :– ಮಾನ್ಯ ವೆಂಕಟೇಶ್‌ರವರು ಹೇಳಿದ ಹಾಗೆ ಇದರ ಬಗ್ಗೆ ಈಗಾಗಲೇ ಸಾಕಷ್ಟು ಮಾತುಕತೆ ಯಾಗಿದೆ. ಮತ್ತು ಸರ್ಕಾರದ ನಿಲುವು ಏನೆಂದು ಆಗಲೇ ತಿಳಿಸಿದ್ದಾರೆ. ಆದ್ದರಿಂದ ದಯವಿಟ್ಟು ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡು ಸಭೆ ನಡೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಸಭೆಯ ಪರವಾಗಿ ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳಿ) :– ಮಾನ್ಯ ಉಪಾಧ್ಯಕ್ಷಣಿಯವರೆ, ನನ್ನ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಪರವಾಗಿ ಕೊಟ್ಟಿರತಕ್ಕಂಥ ಉತ್ತರದಲ್ಲಿ ಅಷ್ಟೊಂದು ಸಮಾಧಾನ ತರುವುದಿಲ್ಲವೆಂದು ನಾನು ಭಾವಿಸುತ್ತೇನೆ. ಕಾರಣ ತಾವೂ ರೈತ ಕುಟುಂಬದಿಂದ ಬಂದಿರತಕ್ಕವರು. ನಿಮಗೂ ಸಹಾ ತೆಂಗು ಬೆಳೆಯತಕ್ಕವರ ಕಷ್ಟಕಾರ್ಪಣ್ಯಗೊತ್ತಿರುವುದೇ ಆಗಿದೆ. ಜನ ಇವತ್ತು ತಮ್ಮಿಂದ ಒಳ್ಳೆಯದನ್ನು ನಿರೀಕ್ಷೆ ಮಾಡುತ್ತಿದ್ದಾರೆ. ನಾನು ಒಂದು ವಿಷಯವನ್ನು ಬಹಳ ಮುಖ್ಯವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ಅದೇನೆಂದರೆ ಹಿಂದೆ ಸನ್ಮಾನ್ಯ ಮುಖ್ಯಮಂತ್ರಿಗಳು ಯಾರು ತೆಂಗನ್ನು ಬೆಳೆಯುತ್ತಿದ್ದಾರೆ. ಆ ಪ್ರದೇಶದ ಜನರನ್ನೆಲ್ಲಾ ಕರೆಯಿಸಿ ಒಂದು ಸಭೆಯನ್ನು ಮಾಡಿ ಕೇಂದ್ರದ ಜೊತೆಯಲ್ಲಿ ವ್ಯವಹಾರ ಮಾಡುತ್ತೇವೆ ಎನ್ನತಕ್ಕ ಒಂದು ಅಶ್ವಾಸನೆಯನ್ನು ಕೊಟ್ಟಂತಹ ಸಂದರ್ಭದಲ್ಲಿ. ಮತ್ತು ಕೆಲವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡ ಹಿನ್ನೆಲೆಯಲ್ಲಿ ಆಟೋಮ್ಯಾಟಿಕ್ ಆಗಿ ತಿಪಟೂರಿನಲ್ಲಿ ಬೆಲೆಗಳು 1900 ಇದ್ದುದು 3200 ರೂಪಾಯಿ ಗಳವರೆಗೆ ಹೋಯಿತು. ಮತ್ತೆ ಸದನ ಮುಗಿದ ತಕ್ಷಣ ಬೆಲೆಗಳು ಇಳಿಮುಖ ಆದವು. ಇದರ ಹಿನ್ನೆಲೆ ಏನು ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ತಮ್ಮ ಉತ್ತರದಲ್ಲಿ ತಾವು ನಿಸ್ಸಾಹಾಯಕತೆಯನ್ನು ತೋರಿಸಿದ್ದೀರಿ. ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಏನು ಸಗಟುದಾರರು ಇದ್ದಾರೆ ದಾಸ್ತಾನು

ಗಾರರು ಇದ್ದಾರೆ, ವ್ಯಾಪಾರಸ್ಥರು ಇದ್ದಾರೆ, ಅವರುಗಳಲ್ಲಿ ಮಧ್ಯಸ್ಥಿಕೆ ಇರತಕ್ಕಂಥಾದ್ದು ಹೊಂದಾಣಿಕೆ ಏನು ಇದೆ. ಈ ಅಂಡರ್‌ಸ್ಟ್ಯಾಂಡಿಂಗನ್ನು ತಪ್ಪಿಸುವ ಪ್ರಯತ್ನ ಮಾಡಿದರೆ ಈ ರೀತಿ ತೊಂದರೆಯಾಗುವುದನ್ನು ತಪ್ಪಿಸುವುದಕ್ಕೆ ಸಾಧ್ಯ ಇದೆ. ಈ ಪ್ರಯತ್ನವನ್ನು ಮಾಡಿದರೆ ಮಾತ್ರ ಇವೊತ್ತು ನಿಜವಾದ ಬೆಲೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇವೊತ್ತು ಕೇರಳದಲ್ಲಿ ಏನು ಬೆಲೆ ಇದೆ. ತುಮಕೂರು, ಮಂಡ್ಯ ಮೈಸೂರು ಭಾಗದಲ್ಲಿ ಬೆಳೆದಿರತಕ್ಕ ಕೊಬ್ಬರಿ ಏನು ಇದೆ. ಕೇರಳದಲ್ಲಿ ಬೆಳೆದಿರತಕ್ಕ ಕೊಬ್ಬರಿ ಬೆಲೆ ಯಾವತ್ತೂ ಒಂದು ಸಾವಿರ ರೂಪಾಯಿ ಜಾಸ್ತಿ ಇರುತ್ತದೆ. ಕೇರಳದಲ್ಲಿ ಬೆಳೆದಿರತಕ್ಕ ಕೊಬ್ಬರಿ ಬೆಲೆ ಮೂರು ಸಾವಿರ ರೂಪಾಯಿ ಇದೆ. ಕರ್ನಾಟಕದಲ್ಲಿ ಬೆಳೆದಿರತಕ್ಕ ಕೊಬ್ಬರಿಗೆ ಎರಡು ಸಾವಿರ, ಎರಡು ಸಾವಿರದ ಇನ್ನೂರು ರೂಪಾಯಿ ಇರಬೇಕಾದರೆ ಇದನ್ನು ಪತಕ್ಕೋನ್ಯರ ಸರ್ಕಾರ ಆರ್ಥ ಮಾಡಿಕೊಳ್ಳುತ್ತಿಲ್ಲ. ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಏನು ಎಂಬುದನ್ನು ತಿಳಿಸಿದರೆ ಮಾತ್ರ ಅನುಕೂಲವಾಗುತ್ತದೆ. ಈ ಬಗ್ಗೆ ಒತ್ತಾಯ ಪೂರ್ವಕವಾಗಿ ಒತ್ತಾಯಮಾಡುತ್ತಾ, ಇದರ ಬಗ್ಗೆ ಸರ್ಕಾರ ಸ್ಪಷ್ಟವಾದ ನಿಲುವನ್ನು ಜನ ವಿದುರು ನೋಡುತ್ತಿದ್ದಾರೆ. ಇವೊತ್ತು ಏನು ಆಗಿದೆ ? ಒಂದು ಕೆ. ಜಿ. ಟೊಮ್ಯಾಟೋ, ಒಂದು ಕೆ. ಜಿ. ಹುರುಳೀಕಾಯಿ 5 ರೂಪಾಯಿ 6 ರೂಪಾಯಿ ಬೆಲೆ ಆಗಿರುವ ಸಂದರ್ಭದಲ್ಲಿ ಕೊಬರಿಗೆ ಭದು ರೂಪಾಯಿ ಅಪವಾ ಆರು ರೂಪಾಯಿ ಬೆಲೆ ಇಲ್ಲ ಎಂಬ ಪರಿಸ್ಥಿತಿಯಲ್ಲಿ ಸರ್ಕಾರ ಗಂಭೀರವಾಗಿ ಇದನ್ನು ಪರಿಶೀಲನೆ ಮಾಡಬೇಕು. ನೀವು ಕೊಬ್ಬರಿತಕ್ಕ ಈ ಉತ್ತರದಿಂದ ಸಮಾಧಾನ ಇಲ್ಲ.

† ಶ್ರೀ ಎಚ್. ಆರ್. ಶಿವರಾಮೇಗೌಡ (ನಾಗಮಂಗಲ) :– ಸನ್ಮಾನ್ಯ ಸಭಾಧ್ಯಕ್ಷರೆಯವರೆ, ಕಳೆದ ನಾಲ್ಕಾರು ತಿಂಗಳ ಹಿಂದಿನ ಅಧಿವೇಶನದಲ್ಲಿ ಕೊಬ್ಬರಿ ಬೆಲೆಯ ವಿಚಾರದಲ್ಲಿ ಸರ್ಕಾರದ ಗಮನಸೆಳೆದು ಬಿಟ್ಟಿದ್ದವ್ವ. ಒಂದನೆ ಅಧಿವೇಶನದಲ್ಲಿ ನಮ್ಮ ಗೌರವಾನ್ವಿತ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಅಂದು ಕೃಷಿ ಸಚಿವರು ಇಂಥದ್ದಂತಹ ಸಂದರ್ಭದಲ್ಲಿ ಫಲವಿಮೆಯನ್ನು ಕೊಟ್ಟಿದ್ದರು. ಈ ರಾಜ್ಯದ ರೈತರ ಬೆವರನ್ನು ಕಾಣಾಡುವುದರಲ್ಲಿ ಒಂದೆ ಬಳುವುದಿಲ್ಲ ಎಂದು ಹೇಳಿದ್ದರು. ನಾವು ಸದನದಲ್ಲಿ ಚರ್ಚೆ ಮಾಡಿದ ಬೆಳ್ಳಿಗೆ ಮರೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಕೊಬ್ಬರಿ ಬೆಳೆಯತಕ್ಕ ಭಾಗದ ಪ್ರಮುಖರುಗಳ ಒಂದು ಸಭೆಯನ್ನು ಕರೆದು ಮುಕ್ತವಾಗಿ ಚರ್ಚೆ ಮಾಡಿ ಕೊಬ್ಬರಿ ಬೆಲೆ ಬಗ್ಗೆ ಏನು ಮಾಡಬೇಕು, ಏನು ಆಗಿದೆ ಎಂಬ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿದರು. ಇವೊತ್ತು ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಅಂದೂ ಸಹ ಕೊಬ್ಬರಿ ಮತ್ತು ತೆಂಗನ್ನು ಬೆಳೆಯತಕ್ಕ ಅನುಭವ ಇರತಕ್ಕ ಮಂತ್ರಿಗಳನ್ನು ಹೊಂದಿದ್ದೆವು. ಇವೊತ್ತು ಸಹ ನಮಗೆ ಹೆಮ್ಮೆ ಇದೆ, ನಾವು ಇಲ್ಲಿ ಪ್ರಶ್ನೆ ಮಾಡಿ ಕೇಳತಕ್ಕದ್ದಲ್ಲ. ಮಾನ್ಯ ಪ್ರಭ್ಟಿಸ್ವಾಮಿಗೌಡರು ಸ್ವತಃ ತೆಂಗು ಬೆಳೆಗಾರರು ಎಂದು ಹೇಳಿದರೆ ತಪ್ಪಲ್ಲ. ಬಹಳ ಚೆನ್ನಾಗಿ ಅವರಿಗೆ ಅನುಭವ ಇದೆ. ತೆಂಗು ಬೆಳೆಗಾರರು ಇವೊತ್ತು ಏನು ಒಂದು ಕಷ್ಟವನ್ನು ಅನುಭವಿಸುತ್ತಿದ್ದಾರೆ ಎನ್ನತಕ್ಕದ್ದು ಸಂಕ್ಷಿಪ್ತವಾಗಿ ಅವರಿಗೆ ಅರ್ಥ ಆಗುತ್ತದೆ. ಆದರೆ ಅವರು ಕೊಟ್ಟಿರುವ ಹೇಳಿಕೆಯಲ್ಲಿ ಕೇಂದ್ರ ಸರ್ಕಾರದ ಕಡೆ ಕೈ ಮಾಡಿ ತೋರಿ ಅವರು ಅಸಹಾಯಕತೆಯನ್ನು ತೋಡಿಕೊಂಡಿದ್ದಾರೆ. ನಾನಾದರೂ ಹೇಳುವುದು ಇಷ್ಟೇ. ಕೇಂದ್ರ ಸರ್ಕಾರ ರೇಟ್ ನಿಗದಿ ಮಾಡತಕ್ಕದ್ದು ಒಂದು ಹಂತದಲ್ಲಿ ಇರಲಿ. ಇವೊತ್ತು ವರ್ತಕರು ಈ ರಾಜ್ಯದಲ್ಲಿ ರೈತರನ್ನು ಸುಲಿಗೆ ಮಾಡುತ್ತಿದ್ದಾರೆ. ಇದರ ಬಗ್ಗೆ ನಿರ್ದಾಕ್ಷಿಣ್ಯ ಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ಸರ್ಕಾರ ಹಿಂದೆ ಮುಂದೆ ನೋಡುವಾರದು . ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳದೇ ವಿಧಿಯಿಲ್ಲ. ಏಕೆಂದರೆ ಕಳೆದ ವಿಧಾನ ಸಭೆಯ ಅಧಿವೇಶನದಲ್ಲಿ ಚರ್ಚೆ ಮಾಡಿದಾಗ ನಾವು ಯಾರ್ಯಾರು ಚರ್ಚೆ ಮಾಡಿದೆವು ಅವರೆಲ್ಲರನ್ನೂ ಸಹಿತ ಇಡೀ ತಿಪಟೂರಿನಲ್ಲಿ ಬಂದ್ ಮಾಡಿ ನಮ್ಮ ಭೂತಗಳನ್ನು ಪೆರವಣಿಗೆ ಮಾಡಿ ಸುಟ್ಟಿದ್ದಾರೆ. ಈ ತರಹ ವರ್ತಕರನ್ನು ಎಕ್ಸ್‌ಪ್ಲಾಯಟ್ ಮಾಡುತ್ತಾರೆ ಎಂದು ಹೇಳಿ ಇಲ್ಲದ ಆಪಾದನೆ ಮಾಡುತ್ತಾರೆ. ಕಳೆದ ಅಧಿವೇಶನ ಆದ ಮೇಲೆ ಹಿಂದಿನ ಹಣಕಾಸಿನ ಸಚಿವರಾದ ಮಾನ್ಯ ರಾಜಶೇಖರ ಮೂರ್ತಿಯವರು ಕೊಬ್ಬರಿ ವ್ಯಾಪಾರಗಾರರ ಮೇಲೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಂಡ ಮೇಲೆ ಎರಡು ಮೂರು ಕೋಟಿ ರೂಪಾಯಿ ಲಾಭ ಬಂದಿದೆ ಎಂದು ಹೇಳಿದರು. ಮೂರು ಕೋಟಿ ರೂಪಾಯಿ ಲಾಭ ಸೋರಿ ಹೋಗತಕ್ಕ ಈ ಒಂದು ವ್ಯವಸ್ಥೆಯಲ್ಲಿ ಇವೊತ್ತು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿಲ್ಲ. ಇವರ ಕ್ರಮ ಏನು ಎಂದರೆ ಕೇಂದ್ರ ಸರ್ಕಾರದ ಕಡೆ ತೋರಿಸಿದ್ದಾರೆ. 1800 ರೂಪಾಯಿ ಆಗಲಿ ಅಥವಾ 2500 ರೂಪಾಯಿ ಆಗಲಿ ಕೇಳಿರತಕ್ಕ ರೇಟನ್ನು ಅವರು ಕೊಡಲಿಲ್ಲ ಎಂದು ಹೇಳತಕ್ಕ ಮಾತು ಒಂದೇ ಅಲ್ಲ. ವರ್ತಕರ ಬಗ್ಗೆ ದಾಸ್ತಾನುಗಾರರ ಬಗ್ಗೆ, ವ್ಯಾಪಾರಸ್ಥರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನತಕಂಥದ್ದನ್ನು ಸರ್ಕಾರ ಸ್ಪಷ್ಟ ಮಾಡಬೇಕು. ಇದರ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಯಾರು ರೈತರನ್ನು ಸುಲಿಗೆ ಮಾಡುತ್ತಿದ್ದಾರೆ, ಹಗಲು ದರೋಡೆ ಮಾಡುತ್ತಿದ್ದಾರೆ, ದಾಸ್ತಾನುಗಾರರು ಅವರಿಗೆ ಬೇಕಾದಾಗ 2400 ರೂಪಾಯಿಗಳಿಗೆ ಏರಿಸುತ್ತಾರೆ. ಕೊಬ್ಬರಿ ಬೆಲೆಯನ್ನು ರೈತರು ತೆಗೆದುಕೊಂಡು ಹೋದಾಗ 1500 ರೂಪಾಯಿಗಳಿಗೆ ಇಳಿಸುತ್ತಾರೆ. ಇವೊತ್ತು ಅವರು ರೈತರ ಬಗ್ಗೆ ಕಳ್ಳಾಟ ಆಡುತ್ತಿದ್ದಾರೆ. ಇದರ ಬಗ್ಗೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಸರ್ಕಾರದಿಂದ ನಿರೀಕ್ಷಣೆ ಮಾಡುತ್ತೇನೆ.

ತ್ತೇವೆ. ದಯಮಾಡಿ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ತೀವ್ರವಾಗಿ ಒಂದು ಸಭೆಯನ್ನು ನಡೆಸಿ ಇತ್ತೀಚೆಗೆ ಏನೇನು ಆಗಿದೆ ಎಂಬುದನ್ನು ತಿಳಿದುಕೊಂಡು ತಾವು ಇದರ ಬಗ್ಗೆ ಕಾರ್ಯೋನ್ಮುಖರಾಗಬೇಕೆಂದು ಹೇಳಿ ಸರ್ಕಾರದ ಗಮನವನ್ನು ಈ ಸಂದರ್ಭದಲ್ಲಿ ಸೆಳೆಯುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಸಭಾಧ್ಯಕ್ಷಣಿಯವರೆ, ಮಾನ್ಯ ಮುಖ್ಯಮಂತ್ರಿಗಳಾಗಿರತಕ್ಕಂಥ ಶ್ರೀ ಬಂಗಾರಪ್ಪನವರು ಹಿಂದೆ ಕೃಷಿ ಸಚಿವರಾಗಿದ್ದಾಗ ತೆಂಗಿನ ಕಾಯಿ ಬೆಳೆಯತಕ್ಕಂಥ ಪ್ರದೇಶದ ರೈತರನ್ನು ಕರೆದು ಮಾತುಕತೆ ನಡೆಸಿದ್ದರು. ಆ ಸಂದರ್ಭದಲ್ಲಿ ಅವರು ಮಾತನಾಡಿದ್ದು ನೋಡಿದಾಗ ನಾವು ಈ ಒಂದು ಸಮಸ್ಯೆಯು ಸರಿಹೋಗುತ್ತದೆ ಎಂದು ತಿಳಿದುಕೊಂಡಿದ್ದೆವು. ಆದರೆ ಈಗ ಅದು ಕೇವಲ ಬಿಸಿಲು ಕುದುರೆಯನ್ನು ತೋರಿಸಿದಂತಾಗಿದೆ. ಆ ದಿಸೆಯಲ್ಲಿ ಇದುವರೆಗೂ ಯಾವ ಕೆಲಸವೂ ಆಗಿಲ್ಲ. ಇದರಿಂದಾಗಿ ರೈತರಿಗೆ ತೊಂದರೆಯಾಗಿದೆ. ಈ ಕುರಿತು ಮಾನ್ಯ ಪುಟ್ಟಸ್ವಾಮಿಗೌಡರು ಏನು ಮಾಡುತ್ತಾರೋ ಗೊತ್ತಿಲ್ಲ ? ಅವರು ಈ ಖಾತೆಯ ಮಂತ್ರಿಯಾಗಿ ಎಷ್ಟು ದಿವಸಗಳ ವರೆಗೆ ಇರುತ್ತಾರೋ ಗೊತ್ತಿಲ್ಲ ? ಇಲ್ಲಿ ದಾಸ್ತಾನು ಮಾಡತಕ್ಕಂಥ ಅವಶ್ಯಕತೆ ಇಲ್ಲ.....

ಶ್ರೀ ಟಿ. ಎಂ. ಮಂಜುನಾಥ :– ಉಪಾಧ್ಯಕ್ಷಣಿಯವರೇ.....

ಉಪಾಧ್ಯಕ್ಷಣಿಯವರು :– ದಯಮಾಡಿ ತಾವುಗಳು ಕುಳಿತುಕೊಳ್ಳಿ. ತಾವುಗಳು ಇದಕ್ಕೆ ಸಿಗ್ನೇಚರಿ ಅಲ್ಲ.

ಶ್ರೀ ಟಿ. ಎಂ. ಮಂಜುನಾಥ್ :– ಇದು ರೈತರಿಗೆ ಸಂಬಂಧಪಟ್ಟ ಬೆಳೆ. ಮಾನ್ಯ ವಿರೋಧ ಪಕ್ಷದ ಅನೇಕ ಸದಸ್ಯರು ಹೇಳಿದ್ದಾರೆ, ಆದರೆ ಅವರು ಹೇಳಿದಂತೆ ಇಲ್ಲ. ಸರಕಾರದವರು ಈ ಕೂಡಲೇ ಹಲವಾರು ಬಗೆಯಾದಂಥ ಕಾರ್ಯಕ್ರಮಗಳನ್ನು ಈ ಬಗ್ಗೆ ತೆಗೆದುಕೊಂಡಿದ್ದಾರೆ. ಆದರೂ ಕೂಡ ಸೇಲ್ಸ್‌ಟ್ಯಾಕ್ಸ್, ತೆರಿಗೆ ಏನು ಹೋಗುತ್ತಾ ಇತ್ತು, ಅದು ಈಗ ಮತ್ತೆ ಸೋರಿ ಹೋಗುತ್ತಾ ಇದೆ. ನಮ್ಮಲ್ಲಿ ತೆಂಗು ಅಭಿವೃದ್ಧಿ ಮಂಡಳಿ ಎಂದು ಒಂದಿದೆ, ಅದು ಈಗಾಗಲೇ ರಾಜ್ಯದಲ್ಲಿ ಉತ್ಪಾದನೆಯಾಗುವ ಒಣಕೊಬ್ಬರಿಗೂ ಸಪೋರ್ಟ್ ಪ್ರೈಸ್ ಒಂದಕ್ಕೆ 2,500 ರೂಪಾಯಿಗಳೆಂದು ಬೆಲೆ ನಿಗದಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಅನೇಕ ಮಾನ್ಯ ಸದಸ್ಯರು ಈ ಬಗ್ಗೆ ವಿವರವಾಗಿ ಹೇಳಿದ್ದಾರೆ, ಅದನ್ನು ಮನಗಂಡು ತೆಂಗು ಬೆಳೆಗಾರರಿಗೋಸ್ಕರ ಮತ್ತು ರೈತರಿಗೋಸ್ಕರ, ಈ ಎಲ್ಲಾ ವಿಚಾರಗಳನ್ನು ಸಮಗ್ರವಾಗಿ ವಿಚಾರ ಮಾಡಿ ತತ್‌ಕ್ಷಣ ಕ್ರಮಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಮಾನ್ಯ ಉಪಾಧ್ಯಕ್ಷಣಿಯವರೆ, ಕೊಬ್ಬರಿಯ ಮಾರುಕಟ್ಟೆ ಬೆಂಬಲ ಬೆಲೆಯ ಬಗ್ಗೆ ಮಾನ್ಯ ಸದಸ್ಯರುಗಳು ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಕಳೆದ ಅಧಿವೇಶನದಲ್ಲಿ ಅಂದಿನ ವ್ಯವಸಾಯ ಮಂತ್ರಿಗಳು ಸದನದಲ್ಲಿ ಭರವಸೆ ಕೊಟ್ಟ ರೀತಿಯಲ್ಲಿ ಮರುದಿವಸವೇ ಸಂಬಂಧಪಟ್ಟ ರೈತಸಕರುಗಳನ್ನು ಕರೆಯಿಸಿ ಸಮಾಲೋಚನೆ ಮಾಡಿ ಒಣಕೊಬ್ಬರಿಗೆ ಕ್ವಿಂಟಾಲ್ ಒಂದಕ್ಕೆ 2,500 ರೂಪಾಯಿಗಳ ಬೆಂಬಲ ಬೆಲೆಯನ್ನು ಕೊಡಬೇಕೆಂದು ಒಂದು ನಿರ್ಣಯಕ್ಕೆ ಬಂದುದರ ಹಿನ್ನೆಲೆಯಲ್ಲಿ ಅಂದಿನ ಮುಖ್ಯಮಂತ್ರಿಯವರೂ ಸಹ ಕೇಂದ್ರ ಸರ್ಕಾರಕ್ಕೆ ಈ ಕುರಿತು ಒತ್ತಾಯವನ್ನು ತಂದಿದ್ದಾರೆ, ಶಿಫಾರಸ್ಸು ಮಾಡಿದ್ದಾರೆ. ಅದರ ಪರಿಣಾಮವಾಗಿ 13–12–90 ರಂದು ಕೇಂದ್ರ ಸರಕಾರದಿಂದ ತೆಂಗು ಒಣಕೊಬ್ಬರಿ ಬೆಲೆ ನಿಗದಿ ಮಾಡತಕ್ಕಂಥ ಸಮಿತಿಯವರು ನಮ್ಮ ರಾಜ್ಯ ಸರಕಾರದ ಹಿರಿಯ ಅಧಿಕಾರಿಗಳೊಡನೆ ಚರ್ಚೆ ಮಾಡಿ ಕೂಡಲೇ ಬೆಂಬಲ ಬೆಲೆಯನ್ನು ನಿರ್ಧಾರ ಮಾಡತಕ್ಕಂಥಾದ್ದರ ಬಗ್ಗೆ ಶೀಘ್ರದಲ್ಲಿಯೇ ಕ್ರಮ ಕೈಗೊಳ್ಳುತ್ತಾರೆ ಎಂಬ ಬಗ್ಗೆ ಇರುವ ಅವರ ವರದಿಯನ್ನು ನಾನು ನೋಡಿದ್ದೇನೆ. ಮಾನ್ಯ ಸದಸ್ಯರುಗಳು ಹೇಳಿದ ಪ್ರಕಾರ ತೆಂಗಿನ ಮಾರುಕಟ್ಟೆಯಲ್ಲಿ ವ್ಯವಹಾರ ಮಾಡತಕ್ಕಂಥ ವ್ಯಾಪಾರಿ ವ್ಯವಹಾರಸ್ಥರು ಸರಿಯಾದ ರೀತಿಯಲ್ಲಿ ವ್ಯವಹರಿಸದ ಕಾರಣ, ರೈತರಿಗೆ ನಿರೀಕ್ಷಿತ ಬೆಲೆ ಸಿಗುತ್ತಿಲ್ಲ ಎಂಬುದು ಸತ್ಯದ ವಿಚಾರ. ಅದು ಸರಕಾರದ ಗಮನಕ್ಕೆ ಬಂದಿದೆ. ಕೊಬ್ಬರಿಯಲ್ಲಿ ಒಣಕೊಬ್ಬರಿ ಮತ್ತು ಎಣ್ಣೆ ಕೊಬ್ಬರಿ ಎಂದು ಎರಡು ವಿಧ ಇದೆ. ಎಣ್ಣೆ ಕೊಬ್ಬರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಭಾರತ ಸರಕಾರದವರು ಕ್ವಿಂಟಾಲ್ ಒಂದಕ್ಕೆ 1,600 ರೂಪಾಯಿಗಳ ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿಪಡಿಸಿ ಕರ್ನಾಟಕ ರಾಜ್ಯದ ಸಹಕಾರಿ ಮಾರುಕಟ್ಟೆ ಮಂಡಳಿ ಮೂಲಕ ರಾಷ್ಟ್ರೀಯ ಕೃಷಿ ಉತ್ಪಾದನಾ ಮಾರಾಟ ಮಹಾಮಂಡಳಿಯು ಖರೀದಿಸುತ್ತದೆ. ಇದರಿಂದ ರೈತರಿಗೂ ಕೂಡ ಸಂತೃಪ್ತಿ ಇದ್ದು ಈ ಬಗ್ಗೆ ಸರಕಾರಕ್ಕೆ ಸಮಾಧಾನಕರವಾದಂಥ ವರದಿ ಈ ಬಗ್ಗೆ ಬಂದಿದೆ. ಆದರೆ ಒಣಕೊಬ್ಬರಿಗೆ ಬೆಲೆ ನಿಗದಿ ಮಾಡದೇ ಇದ್ದುದರಿಂದ ವ್ಯಾಪಾರಸ್ಥರು ಬೇಕಾಗಾರರಿಗೆ ಮೋಸ ಮಾಡುವ ಸಂದರ್ಭ ಬಂದಿದೆ. ಹೀಗಾಗಿ ರೈತರಿಂದ ಕಡಿಮೆ ಬೆಲೆಗೆ ವ್ಯಾಪಾರಸ್ಥರು ಖರೀದಿ ಮಾಡುತ್ತಿರುವುದು ಕೂಡ ಸರಕಾರದ ಗಮನಕ್ಕೆ ಬಂದಿದೆ.

ಆದರೂ ಒಣಕೊಬ್ಬರಿಯಿಂದ ಉತ್ತಮವಾದ ಪದಾರ್ಥ ಬರುವುದರಿಂದ ಕನಿಷ್ಟ 2½ ಸಾವಿರ ಆದರೂ ರೈತರಿಗೆ ಸಿಗಬೇಕೆಂದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಅಭಿಪ್ರಾಯ ಪೊಂದಿದ್ದರೂ ಅದನ್ನು ಅನುಷ್ಠಾನಕ್ಕೆ ಈ ಒಂದು ಕಾರಣದಿಂದ ತರಲಾಗಲಿಲ್ಲ. ಅಷ್ಟೇ ಅಲ್ಲ, ಬಹುತೇಕ ವ್ಯಾಪಾರಿ ಜನರ ಕೈವಾಡದಿಂದ ಸೇಲ್ಸ

ಟ್ಯಾಕ್ಸ್, ಟರ್ನೋವರ್ ಟ್ಯಾಕ್ಸ್ ಕದಿಯುವಂತ ವಿಚಾರ ಅಕ್ರಮಗಳಿಂದ ರಾಜ್ಯಸರ್ಕಾರಕ್ಕೆ ಬರುವ ಆದಾಯ ಕೂಡ ಕಡಿಮೆಯಾಗಿದೆ ಎಂಬುದನ್ನು ನಾವು ಗಮನಿಸಿದ್ದೇವೆ. ಈ ಹಿನ್ನೆಲೆಯಲ್ಲಿ ಐ.ಪಿ.ಎಂ.ಸಿ. ಅಧಿಕಾರಿಗಳು ಇದನ್ನೆಲ್ಲ ಟೈಟನ್ ಮಾಡಲು ಪರಿಶೀಲಿಸುತ್ತಿದ್ದಾರೆ ನಾನೂ ಕೂಡ ಸಂಬಂಧಪಟ್ಟ ಇಲಾಖೆಯ ಸಚಿವರೊಡನೆ ಸಮಾಲೋಚನೆ ಮಾತುತ್ತೇನೆ.

ಶ್ರೀ ಪಾಟಾಳ್ ನಾಗರಾಜ್ :– ಅಧ್ಯಕ್ಷರೇ, ಒಂದು ಕಡೆ ಹೀಗೆ ಧರಣಿ ಕುಳಿತಿರುವಾಗ ಅವರ ಪಾಡಿಗೆ ಅವರು ಕುಳಿತಿರಲಿ ನಮ್ಮ ಪಾಡಿಗೆ ನಾವು ಸಭೆ ನಡೆಸೋಣ ಎಂಬುತಿರುವುದು ಸರಿಯಲ್ಲ.

(ಗೊಂದಲ)

ನಾನು ಕಳಕಳಿಯ ಮನವಿ ಮಾಡುತ್ತೇನೆ.

(ಗೊಂದಲ)

ಅವರ ಪಾಡಿಗೆ ಅವರು ಕುಳಿತಿರಲಿ ನಾವು ಸಭೆ ನಡೆಸೋಣ ಎಂಬ ನೀತಿ ಸರ್ಕಾರದ್ದಾಗಿದ್ದರೆ ಅದು ಸರಿಯಲ್ಲ. ನಾಳೆ ಆ ಕಡೆಯವರೂ ಆಲ್ಲಿ ಕುಳಿತುಕೊಳ್ಳಬೇಕಾಗಬಹುದು.

ಉಪಾಧ್ಯಕ್ಷರು – ಹಿಂದಿನ ಸ್ಪೀಕರ್‌ರವರು ಈ ಬಗ್ಗೆ ಏನು ರೂಲಿಂಗ್ ಕೊಟ್ಟಿದ್ದಾರೆಂದರೆ :

"Sitting of one Member of the House on the floor of the House cannot make proceedings of the House come to a standstill. Therefore, inspite of hon'ble Member sitting Dharna, I think the Proceedings can go on. No single Mamber or a couple or a few Members can render the House incapable of carrying on its business. I therefore, say that sitting on Dharna by one Member of the House does not render the House ineffective.

ಶ್ರೀ ಪಾಟಾಳ್ ನಾಗರಾಜ್ :– ಅದು ಗೊತ್ತಿದೆ. ಹೋದ ಸಲ ಧರಣಿ ನಡೆದಾಗ ಇದೇ ತೀರ್ಪನ್ನು ನೀವು ಕೊಡಬಹುದಿತ್ತು. ಇದು ಸೌಜನ್ಯವಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ರೂಲ್ಸ್‌ನಲ್ಲಿ ಏನಿದೆ ಎಂದು ಅವರು ಓದಿದ್ದಾರೆ. ಅಧ್ಯಕ್ಷರೂ ರೂಲಿಂಗ್ ಕೊಟ್ಟಿದ್ದಾರೆ. ಒಂದು ಹೇಳುತ್ತೇನೆ, ಮಲಗಿದ್ದವರನ್ನು ಎಬ್ಬಿಸಬಹುದು ಆದರೆ ಹಾಗೆ ನಟನೆ ಮಾಡುವವರನ್ನು ಏನೂ ಮಾಡಲು ಆಗುವುದಿಲ್ಲ. ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ ಆದರೂ ಅವರಿಗೆ ಸಮಾಧಾನವಾಗದೆ ಹೀಗೆ ಮಾಡುವುದನ್ನು ನೋಡಿದರೆ this amounts to black-mailing.

ಶ್ರೀ ಪಾಟಾಳ್ ನಾಗರಾಜ್ :– ಛೇ, ಛೇ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಛೇ, ಛೇ ಅಂದರೆ ಅರ್ಥ ಏನು ?

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್ :– ಆ ಮಾತನ್ನು ಕಡತದಿಂದ ತೆಗೆಯಿರಿ, ಅದು ಸರಿಯಲ್ಲ ಯಾರು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್ :– ಶ್ರೀಮತಿ ನಾಗರತ್ನಮ್ಮನವರ ಬಗ್ಗೆ ನನಗೆ ಅಪಾರ ಗೌರವ ಇದೆ. ಸಹೋದರಿಯಾದ ಅವರು ಈ ಮನೆಯ ಅಧ್ಯಕ್ಷರಾಗಿದ್ದರು ಆಗ ಯಾವತ್ತೂ ಇಂಥ ಮಾತಾಡಿರಲಿಲ್ಲ ಅದು ಹೇಗೆ ಇಂದು ಮಾತನಾಡಿದರೋ ಗೊತ್ತಿಲ್ಲ.

*ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ನಾನು ಕೂಡ ಬೆಳಿಗ್ಗೆಯಿಂದ ನೋಡಿದ್ದೇನೆ, ಎಲ್ಲವನ್ನೂ ಕೇಳಿದ್ದೇನೆ. ಇವರ ಮಾತನ್ನೂ ಕೇಳಿದ್ದೇನೆ. ಮುಖ್ಯಮಂತ್ರಿಗಳ ಮಾತನ್ನು ಕೇಳಿದ್ದೇನೆ. ಇವರು ಮಾತನಾಡಿರುವುದನ್ನು ನಾನು ಕೇಳಿದ್ದೇನೆ. ಇನ್ನೊಬ್ಬ ಸಹೋದರರು ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ಮುಖ್ಯಮಂತ್ರಿಗಳ ಉತ್ತರ ಕೊಟ್ಟಿರುವುದನ್ನು ಕೇಳಿದ್ದೇನೆ. ನಾವು ಇನ್ನು ಕನ್‌ಸಿಡರ್ ಮಾಡುತ್ತಿದ್ದೇವೆ ಎನ್ನುವುದನ್ನು ಅವರು

ಅಷ್ಟು ಸ್ಪಷ್ಟವಾಗಿ ಹೇಳಿದ ಮೇಲೆ ಅವರು ನಾವು ಧರಣಿ ಕುಳಿತುಕೊಂಡೇ ಕುಳಿತುಕೊಳ್ಳುತ್ತೇವೆ, ಇದನ್ನು ಮಾಡಲೇಬೇಕು ಎಂದು ಹೇಳಿದರೆ ಹೇಗೆ ? ಯಾವುದೇ ಒಂದು ಸರ್ಕಾರದಲ್ಲಿ ಯಾವುದೇ ಪಕ್ಷದವರು ಇದ್ದರೂ ಕೂಡ ಏಕ್‌ದಂ ಮಾಡುವುದಕ್ಕೆ ಸಾಧ್ಯವೇ ? ಇದಕ್ಕೆ ಬೇಕಾದಷ್ಟು ಪ್ರೊಸೀಜರ್ಸ್ ಇದೆ. ಹೀಗೆ ಇವರುಗಳು ಮಾಡುವುದು ಡೆಮಾಕ್ರಟಿಕ್ ಸೆಟ್-ಅಪ್ ಎಂದು ನೀವು ಏನು ಹೇಳುತ್ತೀರಿ, ಇದು ಸರಿಯಲ್ಲ. ನಾನು ಕೂಡ ಹಿಂದೆ ಸ್ಪೀಕರ್ ಆಗಿದ್ದವಳು, ದಯಮಾಡಿ ನಿಮಗೆ ಕೈಮುಗಿದು ಕೇಳಿಕೊಳ್ಳುತ್ತೇವೆ, ನಿಮ್ಮ ನಿಮ್ಮ ಸ್ಥಳಗಳಿಗೆ ಬಂದು ಕುಳಿತು ಕೊಳ್ಳಿ. ಸುಮ್ಮನೆ ಈ ರೀತಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ನಾನು ಅವರು ಬ್ಲಾಕ್‌ಮೇಲ್ ಮಾಡುತ್ತಾರೆ ಎಂದು ಹೇಳಲಿಲ್ಲ. ಹೀಗೆ ಆಗುತ್ತದೆ ಎಂದು ಹೇಳಿದ್ದೇನೆ. ಬೇಕಾದರೆ ರೆಕಾರ್ಡ್ ತೆಗೆಸಿ ನೋಡಿ. ಏನು ವಾಪಸ್ ತೆಗೆದುಕೊಳ್ಳುವುದು ?

(ಗೊಂದಲ)

ಅದೇನು ಅನ್‌ಪಾರ್ಲಿಮೆಂಟರಿಯೇನೂ ಅಲ್ಲ. ಕುಳಿತುಕೊಳ್ಳಿ ದಯವಿಟ್ಟು. ನೀವು ನಿನ್ನೆ ಮೊನ್ನೆ ಬಂದು, ಹೇಳಿ ಕೊಡುವುದಕ್ಕೆ ಬಂದಿದ್ದೀರಿ. ಪಾರ್ಲಿಮೆಂಟರಿ ಯಾವುದು ಅನ್-ಪಾರ್ಲಿಮೆಂಟರಿ ಯಾವುದು ಎಂದು ನನಗೆ ಗೊತ್ತಿದೆ. ದಯವಿಟ್ಟು ತಾವು ತಮ್ಮ ತಮ್ಮ ಸ್ಥಳಗಳಿಗೆ ಬಂದು ಕುಳಿತುಕೊಳ್ಳಿ. ನಿಮಗೆ ಕೈ ಮುಗಿಯುತ್ತೇನೆ. ನೀವು ಅಲ್ಲಿ ಕುಳಿತುಕೊಂಡರೆ ಹೇಗೆ ? ನಿಮ್ಮ ನಿಮ್ಮ ಸ್ಥಳಗಳಿಗೆ ಬಂದು ಕುಳಿತುಕೊಳ್ಳಿ. ಏನು ಬೇಕಾದರೆ ಚರ್ಚೆ ಮಾಡೋಣ. ಈ ರೀತಿ ಮಾಡಿದರೆ ಏನು ಅರ್ಥ ? ಈ ರೀತಿ ಮಾಡಿದರೆ ಡೆಮಾಕ್ರಟಿಕ್ ಸೆಟ್-ಅಪ್ ಸರಿ-ಹೋಗುತ್ತದೆಯೇ ? ಇದು ಸರಿಯಲ್ಲ. ನಾನು ನಿಮಗೂ ಕೂಡ ಹೇಳಿದ್ದೇನೆ. ಅವರನ್ನು ಕರೆದುಕೊಂಡು ಬಂದು ಕೂಡಿಸಿ ಎಂದು ಹೇಳಿದ್ದೇನೆ. ಸ್ಪೀಕರ್‌ರವರು ಹೇಳಿದ್ದು ಕೇಳಿದ್ದೇನೆ. ಮುಖ್ಯ ಮಂತ್ರಿಯವರು ಹೇಳಿದ್ದನ್ನು ಕೇಳಿದ್ದೇನೆ. ಅವರು ಹೇಳಿದ್ದನ್ನೇ ಹೇಳಿಕೊಂಡು ಎಷ್ಟು ಸಾರಿ ಹೇಳಿದ್ದಾರೆ ಎಂದು ರೆಕಾರ್ಡ್‌ನ್ನು ತೆಗೆಸಿ ನೋಡಿ. ಹೇಳಿದ ಮಾತನ್ನೇ ಎಷ್ಟು ಸಾರಿ ಹೇಳುವುದು ? ಮತ್ತೆ ರಿಪೀಟ್ ಮಾಡಬಾರದು ಎನ್ನುವ ರೂಲ್ ಕೂಡ ಇದೆ. ಒಂದು ಸಾರಿ ಹೇಳಿದ ಮೇಲೆ. ನಾವು ಸಮಾಧಾನವಾಗಿ ಹೌದಪ್ಪಾ, ನಾವು ರೈತರು, ಸಮಗೂ ಏನೋ ಕಷ್ಟವನ್ನು ಹೇಳುತ್ತಿದ್ದಾರೆ, ಅದಕ್ಕೆ ಪರಿಹಾರ ಕಂಡುಹಿಡಿಯಬೇಕು ಎಂದು ಹೇಳುತ್ತಿದ್ದಾರೆ, ನಾವು ಅದರಲ್ಲಿ ಸಹಭಾಗಿಗಳಾಗಿದ್ದೇವೆ. ಅಂಥದ್ದರಲ್ಲಿ ನಾವು ಅಲ್ಲಿಗೇ ಹೋಗಿ ಕುಳಿತುಕೊಂಡು ಬಿಡುತ್ತೇವೆ, ನೀವು ನಡೆಸಲೇ ಬಾರದು, ಹಾಗೆಂದರೆ ಏನು ಅರ್ಥ ? ಅವರು ಅಲ್ಲಿ ಕುಳಿತುಕೊಂಡರೆ ಸಭೆಯನ್ನು ನಡೆಸದೇ ಇರುವುದಕ್ಕೆ ಸಾಧ್ಯವೇ ? ಅದು ಸಾಧ್ಯ ಇಲ್ಲ. ದಯವಿಟ್ಟು ತಮ್ಮ ತಮ್ಮ ಸ್ಥಳಗಳಿಗೆ ಬಂದು ಕುಳಿತುಕೊಳ್ಳಿ. ಏನು ಮಾಡ ಬೇಕೋ ಆಮೇಲಿನಿಂದ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಬಗೆಹರಿಸೋಣ. ಸರ್ಕಾರ ಇದೆ, ಸುಮ್ಮನೆ ನೀವು ಅಲ್ಲಿಗೆ ಹೋಗಿ ಕುಳಿತುಕೊಂಡರೆ ಹೇಗೆ ? ಹೀಗೆ ಕುಳಿತುಕೊಂಡರೆ ಇದು ನ್ಯಾಯವೇ ? ನನ್ನ 35ವರ್ಷದ ಪಬ್ಲಿಕ್ ಲೈಫ್‌ನಲ್ಲಿ ಈ ತರಹ ಹಠ ಮಾಡಿಕೊಂಡು ಧರಣಿ ಕುಳಿತುಕೊಂಡಿರುವುದನ್ನು ನೋಡಿಲ್ಲ. ಸಾಲವನ್ನು ಮನ್ನಾ ಮಾಡಿಬಿಡಿ, ನೀವು ಹೇಳಿಬಿಡಿ. ಸರ್ಕಾರ ಹೇಳಿಬಿಡಲಿ ಎಂದು ಹೇಳಿದರೆ –ಈ ರೀತಿ ಹೇಳುವುದಕ್ಕಾ-ಗುತ್ತದೆಯೇ ?

(ಗೊಂದಲ)

ಉಪಾಧ್ಯಕ್ಷರು :– ಶ್ರೀಯುತ ನಾಗರಾಜ್‌ರವರೇ, ಇನ್ನು ತಮಗೆ ಮಾತನಾಡಲಿಕ್ಕೆ ಅವಕಾಶವಿಲ್ಲ. ಮಾನ್ಯ ಮಂತ್ರಿಗಳು ಅರ್ಧ ಉತ್ತರವನ್ನು ಹೇಳಿದ್ದಾರೆ. ಅವರು ಮುಗಿಸಲಿ.

(ಗೊಂದಲ)

† ಶ್ರೀ ಪಿ. ಜಿ. ಆರ್. ಸಿಂಧ್ಯ (ತನಕಪುರ) :– ಮಾನ್ಯ ಉಪಾಧ್ಯಕ್ಷೀಣಿಯವರೆ, ಇವತ್ತು ಸಭೆಯಲ್ಲಿ ರೈತರ ಸಮಸ್ಯೆಯ ಬಗ್ಗೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ತಮ್ಮ ಅಭಿಪ್ರಾಯಕ್ಕೆ ಸರ್ಕಾರ ಮನ್ನಣೆ ಕೊಡಬೇಕು ಎಂದು ನಮ್ಮ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಧರಣಿ ಕುಳಿತಿದ್ದಾರೆ. ಈಗ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರದಿಂದ ನಮಗೇನೂ ಸಮಾಧಾನ ಇಲ್ಲ. ಅವರಿಗೂ ಸಮಾಧಾನ ಇಲ್ಲ. ಆಡಳಿತ ಪಕ್ಷದಲ್ಲಿರತಕ್ಕಂಥ ಎಲ್ಲಾ ಸದಸ್ಯರುಗಳಿಗೂ ಅವರ ಉತ್ತರದಿಂದ ಸಮಾಧಾನ ಇದೆ ಎಂದು ನಾನು ಅಂದುಕೊಂಡಿಲ್ಲ. ಆದರೆ ಧರಣಿಯಲ್ಲಿ ವಿರೋಧ ಪಕ್ಷದ ಜವಾಬ್ದಾರಿ, ಪಕ್ಷದಲ್ಲಿ ರತಕ್ಕಂಥ ನಮ್ಮ ಮಿತ್ರರುಗಳು ಕುಳಿತಿರುವಾಗ ನಾವು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಕೆಲಸ ಮಾಡುವುದು ಕಷ್ಟವಾಗುತ್ತದೆ. ತಾತ್ವಿಕವಾಗಿ ಸಮಗೂ ಭಾರತೀಯ ಜನತಾ ಪಕ್ಷಕ್ಕೂ ಆಕಾಶ ಮತ್ತು ಭೂಮಿಗೂ ಮಧ್ಯೆ ಇರತಕ್ಕಂಥ ಭಿನ್ನಾಭಿಪ್ರಾಯವಿದ್ದರೂ ಸಹಿತ ನಮ್ಮ ಹಿರಿಯ ಸದಸ್ಯರಾಗಿರತಕ್ಕಂಥ ಮಂತ್ರಿಗಳು ಮತ್ತು ಈ ಸದನದ ಸದಸ್ಯರಾದ ನಮ್ಮ ರಾಜ್ಯದ ಘನತೆ ಗೌರವವನ್ನು , ಈ ಸದನದ ಗೌರವವನ್ನು

ಎತ್ತಿ ಹಿಡಿದಿರತಕ್ಕಂಥ ಶ್ರೀಮತಿ ನಾಗರತ್ನಮ್ಮನವರು ಮಾನ್ಯ ಸದಸ್ಯರಿಗೆ ಮನವಿ ಮಾಡಿಕೊಂಡಿದ್ದಾರೆ. ಈಗ ತಾತ್ವಿಕ ದೃಷ್ಟಿಯಿಂದಾಗಿ ಸರ್ಕಾರ ಕೊಟ್ಟಿರತಕ್ಕಂಥ ಉತ್ತರದ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು. ನಾನು ಉಪಾಧ್ಯಕ್ಷಣಿಯವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಅವರನ್ನು ಕರೆಯಿಸಿ ನೀವು ಮಾತನಾಡಿ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತ್ರಷ್ಟು ಅವರ ಮನಸ್ಸನ್ನು ಒಲಿಸುವುದಕ್ಕೆ ನೀವು ಪ್ರಯತ್ನವನ್ನು ಮಾಡಿ ದಯವಿಟ್ಟು ಧರಣಿ ಕುಳಿತುಕೊಂಡರೆ ನಾವು ಇಲ್ಲಿ ಕೆಲಸ ಮಾಡಬೇಕು ಎಂದು ಹೇಳಿದರೆ ನಮಗೂ ಸಹಿತ ವಿರೋಧ ಪಕ್ಷಕ್ಕೆ ಇಕ್ಕಟ್ಟಾಗುತ್ತದೆ.

0–35 ಪಿ. ಎಂ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೊಬ್ಬರು ಮಾತನಾಡತಕ್ಕ ಸಂದರ್ಭದಲ್ಲಿ ರಾಮನನ್ನು ಮರೆತುಬಿಟ್ಟು ಕೇಂದ್ರದಲ್ಲಿ ಸರ್ಕಾರ ಹೊರಟು ಹೋಯಿತು ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ. ರಾಮನನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದರೆ ಸರ್ಕಾರ ಉಳಿಯತಕ್ಕದ್ದು, ಅದೆಲ್ಲ ಹುಚ್ಚುತನ ಮುಂದೆ ಗೊತ್ತಾಗುತ್ತದೆ. ರೈತರು ಓಟು ಕೊಡುತ್ತಾರೆಂದು ಹೇಳುವುದು ಸುಳ್ಳು. ಅದನ್ನೆಲ್ಲ ಚುನಾವಣೆ ಸಂದರ್ಭದಲ್ಲಿ ನೋಡಿಕೊಂಡು ತೀರ್ಮಾನ ಮಾಡುತ್ತಾರೆ. ಬಿ. ಜೆ. ಪಿ. ಯ ಸದಸ್ಯರುಗಳು ರೈತರ ಸಮಸ್ಯೆಯ ಬಗ್ಗೆ ಚಾಂಪಿಯನ್ ಆಫ್ ಫಾರ್ಮರ್ಸ್ ಎನ್ನುವ ರೀತಿಯಲ್ಲಿ ಕಳೆದ ಒಂದು ವರ್ಷದಿಂದ ಮಾಡುತ್ತಿದ್ದಾರೆ, ನಾವೆಲ್ಲ ವಿರೋಧ ಪಕ್ಷದಲ್ಲಿರುವುದರಿಂದ ನಾವು ನಿಮಗೆ ದಯವಿಟ್ಟು ಆಸನದಲ್ಲಿ ಬಂದು ಕುಳಿತುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ. ತಾವು ಸಹಿತ ಅವರನ್ನು ಈ ಸಭೆಯ ಹೊರಗಡೆ ಕರೆಯಿಸಿ ಅವರ ಮನಸ್ಸನ್ನು ಒಲಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು :– ಈಗ ಮಾನ್ಯ ಸದಸ್ಯರು ಎಲ್ಲರ ಅಭಿಪ್ರಾಯವನ್ನು ಕೇಳಿದ್ದೇನೆ. ತಾವು ಬಂದು ಈ ಸಭೆಯಲ್ಲಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡು ಈ ಸಭೆಯನ್ನು ನಡೆಸಲಿಕ್ಕೆ ತಾವು ಅನುವು ಮಾಡಿಕೊಡಬೇಕು ಮತ್ತು ಇದರ ಬಗ್ಗೆ ವಿರೋಧ ಪಕ್ಷದ ಉಪನಾಯಕರು ಹೇಳಿದಹಾಗೆ ಚರ್ಚೆ ಮಾಡಲಿಕ್ಕೆ ಅಥವಾ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡೋಣ, ತಮ್ಮ ತಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಮಾನ್ಯ ಅಧ್ಯಕ್ಷರೆ, ಒಣಕೊಬ್ಬರಿ ಬೆಲೆ 2500 ರೂಪಾಯಿ ಕೊಡಬೇಕೆಂದು ಹೇಳಿ ಪರಿಶೀಲನೆಯಲ್ಲಿದ್ದಾಗ್ಯೂ ಕೂಡ ರೈತನಿಗೆ ಆ ಬೆಲೆಯನ್ನು ಕೊಡತಕ್ಕದ್ದಕ್ಕೆ ಕೆಲವು ಮಧ್ಯವರ್ತಿಗಳ ಮತ್ತು ಖಾಸಗೀ ವರ್ತಕರ ಕೆಲಸದಿಂದ ಸಾಧ್ಯವಾಗುತ್ತಿಲ್ಲ, ಎನ್ನತಕ್ಕದ್ದನ್ನು ಈ ಸಂದರ್ಭದಲ್ಲಿ ನಮ್ಮ ಮಿತ್ರರಿಗೆ ತಿಳಿಯ ಬಯಸುತ್ತೇನೆ. ಹಲವಾರು ರೀತಿಯ ಮೋಸದ ಪ್ರಕರಣಗಳನ್ನು ಕೇಳಿದ್ದೇವೆ. ರೈತರ ಶೋಷಣೆಯನ್ನು ನಾವು ತಿಳಿದುಕೊಂಡಿದ್ದೇವೆ. ಇವುಗಳನ್ನೆಲ್ಲಾ ಗುರ್ತು ಮಾಡಿ ಅವುಗಳಿಗೆ ಸೂಕ್ತ ಕ್ರಮವನ್ನು ಕೈಗೊಳ್ಳುವುದರ ಮೂಲಕ ಕೊಬ್ಬರಿಗೆ ಕನಿಷ್ಠ 2500 ರೂಪಾಯಿ ಸಿಗುವಂತಹ ರೀತಿಯಲ್ಲಿ ಮಾಡುವುದಕ್ಕೆ ಸರ್ಕಾರ ಎಲ್ಲಾ ಕ್ರಮವನ್ನು ಕೈಗೊಂಡಿದೆ ಎನ್ನತಕ್ಕ ಮಾತನ್ನು ಮಿತ್ರರಿಗೆ ಹೇಳಬಯಸುತ್ತೇನೆ. ಮಾನ್ಯ ಜಯಚಂದ್ರರವರು ಈ ಉತ್ತರದಿಂದ ಸಮಾಧಾನ ತಂದಿಲ್ಲವೆಂದು ಹೇಳಿದರು. ಈವರೆಗೆ ನಡೆದಿರತಕ್ಕ ಅಥವಾ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮವನ್ನು ಅವರ ಗಮನಕ್ಕೆ ತಂದಿದ್ದೇವೆಯೇ ಹೊರತು ಮುಂದೆ ಏನು ಮಾಡುತ್ತೇವೆಂಬುದನ್ನು ಅವರ ಗಮನಕ್ಕೆ ತಂದಿಲ್ಲ. 13–12–90 ರಂದು ಕೇಂದ್ರ ಸರ್ಕಾರದ ಬೆಲೆ ನಿಗದಿತ ಆಯೋಗದವರು ಬಂದು ಇದರ ಬಗ್ಗೆ ಪ್ರಸ್ತಾಪ ಮಾಡಿ ಕೊಂಡು ಹೋದಮೇಲೆ ಅಲ್ಲಿಂದ ಪ್ರಕಟಣೆಯಾದನಂತರ ಆ ಬೆಲೆಯನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತರತಕ್ಕ ದ್ದಕ್ಕೆ ಸ್ವಷ್ಟ ಭರವಸೆಯನ್ನು ಅವರಿಗೆ ಕೊಡಬಯಸುತ್ತೇನೆ. ಎರಡನೆಯದಾಗಿ 2 ಬೆಲೆಯನ್ನು ನಿಗದಿ ಮಾಡಿದ್ದಾರೆ ಎಣ್ಣೆ ಕೊಬ್ಬರಿ ಮತ್ತು ಒಣಕೊಬ್ಬರಿಯ ಬಗ್ಗೆ ರೈತರಿಗೆ ಸಾಕಷ್ಟು ಪ್ರಚಾರ ಮಾಡಬೇಕು. ಸರ್ಕಾರದ ಬೆಲೆಯೇ 1600 ಎಂದು ಮೋಸ ಮಾಡಿ 1600 ಕ್ಕೆ ತೆಗೆದುಕೊಳ್ಳತಕ್ಕ ಹಲವಾರು ಪ್ರಕರಣಗಳನ್ನು ಕೇಳಿದ್ದೇವೆ. ಆ ಕೆಲಸವನ್ನು ಕೂಡ ಎ. ಪಿ. ಎಂ. ಸಿ. ಅಧಿಕಾರಿಗಳ ಮೂಲಕ ಕಟ್ಟುನಿಟ್ಟಾಗಿ ರೈತರಿಗೆ ಮನದಟ್ಟು ಮಾಡುವಂತಹ ಕೆಲಸವನ್ನು ಮಾಡಬಯಸುತ್ತೇವೆ. ಮೂರನೆಯದಾಗಿ ಎ. ಪಿ. ಎಂ. ಸಿ. ಅಧಿಕಾರಿಗಳು ನಮ್ಮ ಮಿತ್ರರು ಅಭಿಪ್ರಾಯಪಟ್ಟ ಹಾಗೆ ಅವರ ನಿರ್ಲಕ್ಷತೆ ಅಥವಾ ನಿಷ್ಕ್ರಿಯತೆ, ಅಥವಾ ಶಾಮೀಲು ಆಗುವುದರಿಂದ ರೈತರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದನ್ನೂ ಕೂಡ ಗಮನದಲ್ಲಿಟ್ಟುಕೊಂಡು ಸಂಬಂಧ-ಪಟ್ಟ ಇಲಾಖೆಯ ಮುಖಾಂತರ ಸೂಕ್ತವಾದ ನಿರ್ದೇಶನವನ್ನು ಕೊಟ್ಟು ಸರಿಪಡಿಸುವಂತಹ ಪ್ರಯತ್ನ ಮಾಡುವ ಹಂತದಲ್ಲಿದ್ದೇವೆ. ಇದು ಕೇವಲ ಭಾಷಣ ಅಲ್ಲ. ಸರ್ಕಾರ ತನ್ನ ಭರವಸೆಯನ್ನು ಈ ಸಭೆಗೆ ಕೊಟ್ಟಮೇಲೆ ಅದರ ಹಿನ್ನೆಲೆಯಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇತ್ತೀಚೆಗೆ ಕೊಬ್ಬರಿ ಬೆಲೆಗೆ ಆಗಸ್ಟ್ ತಿಂಗಳಲ್ಲಿ ತಿಪಟೂರಿನಲ್ಲಿ ನಡೆದಂತಹ ವಹಿವಾಟಿನ ಮೇಲೆ 2,000–2500 ರೂಪಾಯಿ ಆಗಿತ್ತು. ಅರಸೀಕೆರೆಯಲ್ಲಿ 1,636–2,611 ರೂಪಾಯಿ ಆಗಿತ್ತು. ತುರುವೇಕೆರೆಯಲ್ಲಿ 1800 ರೂಪಾಯಿ ಆಗಿತ್ತು. ಚಿಕ್ಕಮಗಳೂರು, ಚಿಕ್ಕನಾಯಕನಹಳ್ಳಿಯಲ್ಲಿ ಬೆಲೆ ಮೇಲೆ ಏರುತ್ತಿರುವುದು ನಮ್ಮ

ಆಂಕಿ ಅಂಶಗಳ ಪ್ರಕಾರ ನಾವು ಮನಗಂಡಿದ್ದೇವೆ. ಮತ್ತೊಂದು ಮಾತನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ.ತಿಪಟೂರಿನಲ್ಲಿ ಒಂದು ಸ್ಪೇಟ್ ಮಾರ್ಕೆಟಿಂಗ್ ಫೆಡರೇಷನ್ ಮತ್ತು ಸ್ಯಾಫಲೆಡ್ರೇಷ್ನ್‌ದವರಸಂಯುಕ್ತ ಒಂದು ವೆಂಚರ್‌ದಲ್ಲಿ ಒಂದು ಬ್ರಾಂಚ್ ಕೂಡ ತೆರೆದಿದ್ದೇವೆ. ಅವರು 2,600 ರೂಪಾಯಿ ಪ್ರಕಾರ ಈಗಾಗಲೇ 150 ಕ್ವಿಂಟಲ್ ಕೊಬ್ಬರಿಯನ್ನು ಖರೀದಿಸಿದ್ದಾರೆ ಎನ್ನತಕ್ಕಂಥ ವರದಿ ಕೂಡ ನನಗೆ ಬಂದಿದೆ. ಆದ್ದರಿಂದ ಸರ್ಕಾರ ಈ ಒಂದು ಬೆಲೆ ಕುಸಿತದಿಂದ ರೈತರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳತಕ್ಕಂಥ ಒಂದು ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನುವಂಥ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಅಲ್ಲದೆ ಅವರು ಹೇಳಿರತಕ್ಕಂಥ ಲೈನ್ಸ್, ನಲ್ಲಿಯೇ ನಾವು ನಮ್ಮ ಕ್ರಮಗಳನ್ನು ಬಿಗಿ ಮಾಡತಕ್ಕಂಥಾದ್ದಕ್ಕೆ ಎಲ್ಲಾ ಕ್ರಮ ಕೈಗೊಂಡಿದ್ದೇವೆ.

ಉಪಾಧ್ಯಕ್ಷರು :– ಈಗ ಮಾನ್ಯ ಎಂ. ವಿ. ವೆಂಕಟಪ್ಪನವರು ಆರೋಗ್ಯ ಮಂತ್ರಿಗಳ ಗಮನಪನು ಸೆಳೆಯುವುದು.

ಎಲ್. ಆರ್. ಶಿವರಾಮೇಗೌಡ : ಅಧ್ಯಕ್ಷರೆ, ಇವರ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕಾಗುತ್ತದೆ.

ಉಪಾಧ್ಯಕ್ಷರು :– ತಾವು ಅವರ ಹತ್ತಿರ ಹೋಗಿ ಮಾತನಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಅಧ್ಯಕ್ಷರೆ, ಈಗ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ನಾವು ಅದನ್ನು ಅರ್ಥ ಮಾಡಿಕೊಳ್ಳದೇ ಹೋದರೆ ಈ ಪ್ರಶ್ನೆ ಕೇಳಿ ಏನು ಪ್ರಯೋಜನವಾಗುತ್ತದೆ ?

ಉಪಾಧ್ಯಕ್ಷರು :– ತಾವು ಅವರ ಹತ್ತಿರ ಹೋಗಿ ಮಾತನಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಅಧ್ಯಕ್ಷನೆ, ಒಂದೇ ಒಂದು ಕ್ಲಾರಿಫಿಕೇಷನ್. ಈಗ ತಿಪಟೂರಿನಲ್ಲಿ ಒಂದು ಬಿಗಿಯಾದ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳುತ್ತಿದ್ದಾರೆ. ಅದು ನಿಜವಾಗಿಯೂ ಒಪ್ಪತಕ್ಕಂಥ ವಿಚಾರ. ಆದರೆ ಈಗ ಏನಾಗಿದೆ ಎಂದರೆ, ಈ ಸದನದಲ್ಲಿ ಚರ್ಚೆ ಮಾಡಿ ಆದಮೇಲೆ ತಿಪಟೂರಿನಲ್ಲಿ ಬಿಗಿ ಮಾಡಿದ ಮೇಲೆ ಬೇರೆ ಕಡೆ ಅಂದರೆ ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಅರಸೀಕೆರೆ ಭಾಗಗಳಲ್ಲಿ ವ್ಯಾಪಾರ ಮಾಡಲಿಕ್ಕೆ ಹೊರಟಿದ್ದಾರೆ. ಅಲ್ಲಿ ಇವೊತ್ತು ರೈತರನ್ನು ದರೋಡೆ ಮಾಡುತ್ತಿದ್ದಾರೆ. ಅದನ್ನು ತಪ್ಪಿಸುವುದಕ್ಕೆ ತಿಪಟೂರಿನಲ್ಲಿ ಒಂದು ಸ್ಕ್ವಾಡ್ ಇಟ್ಟು, ಯಾರು ತಪ್ಪು ಮಾಡುತ್ತಾರೆ, ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವಂಥ ಕೆಲಸ ಸರ್ಕಾರದಿಂದ ಆಗಬೇಕು. ಆಗ ರೈತರಿಗೆ ಏನಾದರೂ ಪ್ರಯೋಜನವಾಗುತ್ತದೆ. ಇಲ್ಲದೇ ಇದ್ದರೆ ಏನೂ ಆಗುವುದಿಲ್ಲ ಎನ್ನುವ ಮಾತನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ವಿಷಯ (2) ಮಂಡ್ಯ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಮಿದುಳು ಜ್ವರ ಹರಡಿರುವುದು.

ಶ್ರೀ ಎಂ. ವಿ. ವೆಂಕಟಪ್ಪ :– ಮಾನ್ಯ ಅಧ್ಯಕ್ಷರೆ, ಕಳೆದ 15 ದಿವಸಗಳಿಂದಲೂ ಕೋಲಾರ, ಬಳ್ಳಾರಿ, ಮಂಡ್ಯ ಜಿಲ್ಲೆಗಳಲ್ಲಿ ಮೆದುಳು ಜ್ವರ ಹರಡಿದ್ದು ಸುಮಾರು 10–15 ಮಕ್ಕಳು ತೀರಿ ಹೋಗಿದ್ದಾರೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಯವರು ಹೇಳಿಕೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಯವರು) ಮಾನ್ಯ ಅಧ್ಯಕ್ಷರೆ,

ರಾಜ್ಯದಲ್ಲಿ ಮಿದುಳು ಜ್ವರದ ಪ್ರಕರಣಗಳು ಕೋಲಾರ, ಮಂಡ್ಯ, ಬಳ್ಳಾರಿ ಜಿಲ್ಲೆಗಳ ಈ ನಗರಗಳಲ್ಲಿ ಕಾಣಿಸಿಕೊಂಡಿದೆ. ಆಕ್ಟೋಬರ್ ಮಧ್ಯ ಭಾಗದಿಂದ ಇದುವರೆಗೆ ಎಂದರೆ 13–12–1990 ತಾರೀಖಿನವರೆಗೆ 92 ಪ್ರಕರಣಗಳು ವರದಿಯಾಗಿದ್ದು 29 ರೋಗಿಗಳು ಮರಣ ಹೊಂದಿರುತ್ತಾರೆ. ಪ್ರಕರಣಗಳ ವಿವರ ಈ ರೀತಿ ಇದೆ.

ಜಿಲ್ಲೆ	ಪ್ರಕರಣಗಳು	ಮರಣ
1. ಬಳ್ಳಾರಿ	27	11
2. ಕೋಲಾರ	38	11
3. ಮಂಡ್ಯ	27	7
ಒಟ್ಟು	92	29